# ಮಂಗಳೂರು ವಿಶ್ವವಿದ್ಯಾನಿಲಯ

**Accredited by NAAC with `A' Grade**

ಸಂಖ್ಯೆ: ಮಂ.ವಿ./ಪ.ವಿ./2018–19/ಇ.4

ಕುಲಸಚಿವ (ಪರೀಕ್ಷಾಂಗ)ರ ಕಛೇರಿ,
ಮಂಗಳಗಂಗೋತ್ರಿ – 574 199.
ದಿನಾಂಕ: 19.03.2019

**ಪ್ರಕಟಣೆ**

ವಿಷಯ: ಜೂನ್ 2019ರಲ್ಲಿ ನಡೆಯಲಿರುವ ದ್ವಿತೀಯ/ಚತುರ್ಥ ಸೆಮಿಸ್ಟರ್ ಎಂ.ಬಿ.ಎ. ಪರೀಕ್ಷೆಗಳ ಬಗ್ಗೆ.

-------

ಮಂಗಳೂರು ವಿಶ್ವವಿದ್ಯಾನಿಲಯದ ಎಂ.ಬಿ.ಎ. ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ದ್ವಿತೀಯ/ಚತುರ್ಥ ಸೆಮಿಸ್ಟರ್ ಪರೀಕ್ಷೆಗಳು ದಿನಾಂಕ 03.06.2019ರಿಂದ ಜರುಗಲಿರುವುದು.

ಅದರಂತೆ ಪರೀಕ್ಷೆಗಳಿಗೆ ಅರ್ಹರಾದ ವಿದ್ಯಾರ್ಥಿಗಳು ತಾವು ವ್ಯಾಸಂಗ ಮಾಡಿದ ವಿಭಾಗ/ಕಾಲೇಜುಗಳಲ್ಲಿ ಈ ಕೆಳಗೆ ನಮೂದಿಸಿರುವಂತೆ ಪರೀಕ್ಷಾ ಶುಲ್ಕವನ್ನು ಪಾವತಿಸಿ ಅರ್ಜಿಯನ್ನು ಸಂಬಂಧಪಟ್ಟ ಸ್ನಾತಕೋತ್ತರ ವಿಭಾಗದ ಅಧ್ಯಕ್ಷರು/ಕಾಲೇಜಿನ ಪ್ರಾಂಶುಪಾಲರ ಮೂಲಕ ಕುಲಸಚಿವ(ಪರೀಕ್ಷಾಂಗ) ಇವರಿಗೆ ಸಲ್ಲಿಸಲು ತಿಳಿಸಲಾಗಿದೆ.

1. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ (ದಂಡ ಶುಲ್ಕವಿಲ್ಲದೆ) : 15.04.2019.

   ದಂಡ ಶುಲ್ಕದೊಂದಿಗೆ (ದಿನವೊಂದಕ್ಕೆ ರೂ. 240/–ರಂತೆ) : 16.04.2019 ರಿಂದ 22.04.2019ರ ತನಕ

2. ನಿಗದಿಪಡಿಸಿರುವ ಪರೀಕ್ಷಾ ಶುಲ್ಕದ ದರಗಳು :

   ಪೂರ್ಣ ಪರೀಕ್ಷೆಗೆ : ರೂ. 1,800.00
   ವಿಷಯವೊಂದಕ್ಕೆ : ರೂ. 480.00

**ಸೂಚನೆಗಳು**

1. ಪ್ರಥಮ ಬಾರಿಗೆ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳು ಎಲ್ಲಾ ವಿಷಯಗಳಿಗೆ/ಪತ್ರಿಕೆಗಳಿಗೆ ಕಡ್ಡಾಯವಾಗಿ ನೋಂದಣಿ ಮಾಡತಕ್ಕದ್ದು. ದ್ವಿತೀಯ/ಚತುರ್ಥ ಸೆಮಿಸ್ಟರ್ ನಿಯಮಿತ ಹಾಗೂ ಪುನರಾವರ್ತಿತ ವಿದ್ಯಾರ್ಥಿಗಳು ಆನ್‌ಲೈನ್ ಮುಖಾಂತರ ಅರ್ಜಿಗಳನ್ನು ಸಲ್ಲಿಸುವುದು.

2. ಸವಿವರವಾದ ವೇಳಾಪಟ್ಟಿಯನ್ನು ಹಾಗೂ ಪರೀಕ್ಷಾ ಕೇಂದ್ರವನ್ನು ಶೀಘ್ರದಲ್ಲಿ ಪ್ರಕಟಿಸಲಾಗುವುದು.

3. ಆನ್‌ಲೈನ್ ಎಪ್ಲಿಕೇಶನ್ ಪ್ರೊಸೆಸಿಂಗ್ ಶುಲ್ಕ ರೂ. 110.00 (ರೂಪಾಯಿ ನೂರ ಹತ್ತು)ನ್ನು ವಿಭಾಗ / ಕಾಲೇಜು ಮುಖ್ಯಸ್ಥರಲ್ಲಿ ಪಾವತಿಸಿ ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸುವುದು.

4. ***ಅಪೂರ್ಣವಾದ ಅರ್ಜಿಗಳನ್ನು ತಿರಸ್ಕರಿಸಲಾಗುವುದು ಹಾಗೂ ಸದ್ರಿ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಲು ಅರ್ಹರಾಗಿರುವುದಿಲ್ಲ. ಶುಲ್ಕ ಪಾವತಿಸಿದ ರಶೀದಿ/ಚಲನ್‌ನನ್ನು ಪ್ರತ್ಯೇಕವಾಗಿ ಎಲ್ಲಾ ವಿವರಗಳನ್ನೊಳಗೊಂಡ ಮಾಹಿತಿಯೊಂದಿಗೆ ಸಲ್ಲಿಸತಕ್ಕದ್ದು.***

5. ***ಕುಲಸಚಿವರಿಂದ ಪ್ರವೇಶಾತಿ ಅನುಮೋದನೆಯಾಗದ / ಕಡಿಮೆ ಹಾಜರಾತಿ ಇರುವ ವಿದ್ಯಾರ್ಥಿಗಳು ಪರೀಕ್ಷೆಗೆ ಅರ್ಜಿಗಳನ್ನು ಸಲ್ಲಿಸಲು ಅನರ್ಹರಾಗಿರುತ್ತಾರೆ.*** **ಪ್ರವೇಶಾವಕಾಶವು ಅಮಾನ್ಯವಾಗಿರುವ ಅಥವಾ ವಿಶ್ವವಿದ್ಯಾನಿಲಯದಿಂದ ಪ್ರವೇಶವು ಅನುಮೋದಿತವಾಗಿಲ್ಲದ ಅಥವಾ ನಿರ್ದಿಷ್ಟ ಪಡಿಸಲಾದ ವಿದ್ಯಾರ್ಥಿಗಳ ಸಂಖ್ಯೆಗಿಂತ ಹೆಚ್ಚಿಗೆಯಾಗಿ ವಿಭಾಗ / ಕಾಲೇಜಿಗೆ ಅಥವಾ ವ್ಯಾಸಂಗ ಕ್ರಮಕ್ಕೆ ಪ್ರವೇಶ ಪಡೆದಿರುವ ಯಾವೊಬ್ಬ ವಿದ್ಯಾರ್ಥಿಯೂ, ವಿಭಾಗ / ಕಾಲೇಜು ಅಥವಾ ವಿಶ್ವವಿದ್ಯಾನಿಲಯವು ನಡೆಸುವ ಪರೀಕ್ಷೆಗೆ ಹಾಜರಾಗಲು ಅರ್ಹರಾಗಿರುವುದಿಲ್ಲ. ಅಲ್ಲದೆ ಆಯಾ ಕೋರ್ಸಿನ ನಿಯಮದ ಪ್ರಕಾರ ಪರೀಕ್ಷೆ ತೆಗೆದುಕೊಳ್ಳಲು ಅರ್ಹರಲ್ಲದ ವಿದ್ಯಾರ್ಥಿಗಳು ಅರ್ಜಿಗಳನ್ನು ಸಲ್ಲಿಸುವಂತಿಲ್ಲ.**

6. ಇನ್ನಿತರ ಕಾರ್ಯ ಚಟುವಟಿಕೆಗಳಲ್ಲಿ ಭಾಗವಹಿಸಿರುವುದರಿಂದ (ವಿಭಾಗ / ಕಾಲೇಜು ಮತ್ತು ವಿಶ್ವವಿದ್ಯಾನಿಲಯವನ್ನು ಪ್ರತಿನಿಧಿಸಿ) ವಿಭಾಗ / ಕಾಲೇಜುಗಳಲ್ಲಿ ಹಾಜರಿಲ್ಲದ ವಿದ್ಯಾರ್ಥಿಗಳು ಕೂಡಾ ನಿಗದಿತ ಶುಲ್ಕದೊಂದಿಗೆ ಆನ್‌ಲೈನ್ ಮುಖಾಂತರ ಪರೀಕ್ಷಾ ಅರ್ಜಿಯನ್ನು ಸಲ್ಲಿಸುವಂತೆ (ಇತರ ವಿದ್ಯಾರ್ಥಿಗಳೊಂದಿಗೆ) ಸಂಬಂಧಪಟ್ಟ ವಿಭಾಗದ ಅಧ್ಯಕ್ಷರು/

ಕಾಲೇಜುಗಳ ಪ್ರಾಂಶುಪಾಲರುಗಳು ನಿಗಾವಹಿಸತಕ್ಕದ್ದು.

7. *ಪರೀಕ್ಷೆಗಳಿಗೆ ಹಾಜರಾಗುವ ಅಭ್ಯರ್ಥಿಗಳ ಪರೀಕ್ಷಾ ಹಣಕಾಸು ತಖ್ತೆ ಹಾಗೂ ಪರೀಕ್ಷಾರ್ಥಿಗಳ ಪಟ್ಟಿಯನ್ನು ಅನುಮೋದಿಸಲ್ಪಟ್ಟ ಪ್ರವೇಶಾನುಮೋದನೆ ಪಟ್ಟಿಯಲ್ಲಿ ಸೂಚಿಸಿರುವ ಮಾದರಿಯಲ್ಲಿ ಯಾವುದೇ ಕಾಗುಣಿತ ವ್ಯತ್ಯಾಸವಿಲ್ಲದಂತೆ ದಾಖಲಿಸಬೇಕು.*

8. ಒಮ್ಮೆ ಪಾವತಿಸಲಾದ ಪರೀಕ್ಷಾ ಶುಲ್ಕವನ್ನು ಯಾವ ಕಾರಣಕ್ಕೂ ಮರುಪಾವತಿ ಮಾಡಲಾಗುವುದಿಲ್ಲ ಹಾಗೂ ಅದನ್ನು ಮುಂದಿನ ಪರೀಕ್ಷೆಗಳಿಗೆ ಸರಿದೂಗಿಸಿಕೊಳ್ಳಲಾಗುವುದಿಲ್ಲ.

9. ಅಭ್ಯರ್ಥಿಗಳು ತಮ್ಮ ಪರೀಕ್ಷಾ ಶುಲ್ಕವನ್ನು ವಿಭಾಗ / ಕಾಲೇಜಿನಲ್ಲಿ ಪಾವತಿಸಬೇಕು ಮತ್ತು ಆನ್‌ಲೈನ್ ಮುಖಾಂತರ ಅರ್ಜಿಯನ್ನು ಸಲ್ಲಿಸಬೇಕು. ಶುಲ್ಕವನ್ನು ಪಾವತಿಸಿದ ಬಗ್ಗೆ ಪಡೆದ ರಶೀದಿಯನ್ನು ಪ್ರತ್ಯೇಕವಾಗಿ ಕಳುಹಿಸಿಕೊಡಬೇಕು ಹಾಗೂ ಮೊಬಲಗು, ದಿನಾಂಕ ಮತ್ತು ರಶೀದಿ ಸಂಖ್ಯೆಗಳನ್ನು ಆನ್‌ಲೈನ್ ಪರೀಕ್ಷಾ ಅರ್ಜಿಯಲ್ಲಿ ವಿವರವಾಗಿ ನಮೂದಿಸಬೇಕು.

10. ವಿದ್ಯಾರ್ಥಿಗಳು ಪರೀಕ್ಷೆಯ ಯಾವುದಾದರೂ ಭಾಗ/ ಭಾಗಗಳಿಗೆ ಪಾವತಿಸಲಿರುವ ಒಟ್ಟು ಪರೀಕ್ಷಾ ಶುಲ್ಕವು ನಿಗದಿತ ಪೂರ್ಣ ಪರೀಕ್ಷಾ ಶುಲ್ಕವನ್ನು ಮೀರಬಾರದು.

11. ಮೇಲೆ ನಿಗದಿಪಡಿಸಿದ ಪರೀಕ್ಷಾ ಶುಲ್ಕದ ಜೊತೆಗೆ ಪ್ರತೀ ಪರೀಕ್ಷೆಗೆ ರೂ.210/- ಅಂಕಪಟ್ಟಿ ಶುಲ್ಕ ಮತ್ತು ರೂ. 110/- ಆನ್‌ಲೈನ್ ಎಪ್ಲಿಕೇಶನ್ ಪ್ರೊಸೆಸಿಂಗ್ ಶುಲ್ಕಗಳನ್ನು ಪಾವತಿಸತಕ್ಕದ್ದು.

12. ವಿದೇಶಿ ಅಭ್ಯರ್ಥಿಗಳು ನಿಗದಿಪಡಿಸಿದ ಶುಲ್ಕದ ಮೂರು ಪಟ್ಟು ಶುಲ್ಕವನ್ನು ಪಾವತಿಸತಕ್ಕದ್ದು.

13. ಅ) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದ ಕರ್ನಾಟಕ ರಾಜ್ಯದ ಅಭ್ಯರ್ಥಿಗಳು ಮಾತ್ರ ಪರೀಕ್ಷಾ ಶುಲ್ಕ ವಿನಾಯಿತಿ ಪಡೆಯಲು ಅರ್ಹರಾಗಿರುತ್ತಾರೆ. ಸದ್ರಿ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕವನ್ನು ಕಾಲೇಜು ಮುಖ್ಯಸ್ಥರು ಸಮಾಜ ಕಲ್ಯಾಣ ಇಲಾಖೆಯಿಂದ ಮರುಭರಣೆ ಪಡೆದು ಹಿಂದಿನ ವರ್ಷಗಳ ಶುಲ್ಕ ಬಾಕಿಯಿದ್ದಲ್ಲಿ ಅದನ್ನು ವಿಶ್ವವಿದ್ಯಾನಿಲಯ ನಿಧಿಗೆ ಜಮೆ ಮಾಡುವಂತೆ ತಿಳಿಸಲಾಗಿದೆ.

    ಆ) ಪ್ರ. ವರ್ಗ-1 (ಆದಾಯ ಮಿತಿ ರೂ. 2,50,000/- ಮೀರದ) ಹಾಗೂ ಇತರೇ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ವರಮಾನ ರೂ. 1,00,000/-ಕ್ಕಿಂತ ಕಡಿಮೆ ಇರುವ ಕರ್ನಾಟಕ ರಾಜ್ಯದ ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕವನ್ನು ಪಾವತಿಸಿ, ತದನಂತರ ಕಾಲೇಜು ಪ್ರಾಂಶುಪಾಲರ ಮೂಲಕ ಸಂಬಂಧಪಟ್ಟ ಇಲಾಖೆಗೆ ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಿ ಕ್ಲೇಮು ಪಡೆಯುವುದು.

    ಇ) ಪುನರಾವರ್ತಿತ ವಿದ್ಯಾರ್ಥಿಗಳು ಶುಲ್ಕ ವಿನಾಯಿತಿ ಪಡೆಯಲು ಅರ್ಹರಾಗಿರುವುದಿಲ್ಲ. ಆದರೆ ಪರೀಕ್ಷಾ ಶುಲ್ಕ ವಿನಾಯಿತಿ ಪಡೆಯುವ ವಿದ್ಯಾರ್ಥಿಗಳೂ ಸೇರಿದಂತೆ ಎಲ್ಲಾ ವಿದ್ಯಾರ್ಥಿಗಳು ರೂ. 210/- ಅಂಕಪಟ್ಟಿ ಶುಲ್ಕ ಮತ್ತು ರೂ. 110/- ಆನ್‌ಲೈನ್ ಎಪ್ಲಿಕೇಶನ್ ಪ್ರೊಸೆಸಿಂಗ್ ಶುಲ್ಕವನ್ನು ಪಾವತಿಸತಕ್ಕದ್ದು.

14. ವಿದ್ಯಾರ್ಥಿಗಳಿಂದ ಪಡೆದ ಶುಲ್ಕವನ್ನು ಈ ಕೆಳಗಿನ ಕೋಡ್ ಸಂಖ್ಯೆಗಳಲ್ಲಿ ಬ್ಯಾಂಕ್ ಚಲನ್ ಮುಖಾಂತರ ಮಂಗಳೂರು ವಿಶ್ವವಿದ್ಯಾನಿಲಯ ನಿಧಿಗೆ ಪಾವತಿಸತಕ್ಕದ್ದು.

    ಅ) ಅರ್ಜಿ ಶುಲ್ಕ ... 008/14

    ಆ) ಪರೀಕ್ಷಾ ಶುಲ್ಕ ... 008/23

    ಇ) ಅಂಕಪಟ್ಟಿ ಶುಲ್ಕ ... 008/24

15. ಕೆಳಗೆ ನಮೂದಿಸಿರುವ ತಖ್ತೆಗಳನ್ನು ಮತ್ತು ದಾಖಲೆ ಪತ್ರಗಳನ್ನು ಈ ಕಛೇರಿಗೆ ದಿನಾಂಕ: ***<u>27.04.2019</u>ರ*** ಒಳಗಾಗಿ ಕಳುಹಿಸಿಕೊಡುವುದು.

    ಅ) ಆನ್‌ಲೈನ್ ಅಭ್ಯರ್ಥನ ಪಟ್ಟಿ - ದ್ವಿಪ್ರತಿಗಳಲ್ಲಿ.

    ಆ) ಕ್ರೋಢೀಕೃತ ಪರೀಕ್ಷಾ ಶುಲ್ಕವನ್ನು ಪಾವತಿಸಿದ ಒಂದು ಚಲನ್ ಅಥವಾ ಡಿ.ಡಿ.ಯನ್ನು ದಿನಾಂಕ ***27.04.2019ರ*** ಒಳಗೆ ಈ ಕಛೇರಿಗೆ ಕಳುಹಿಸುವುದು.

ಇ) ಹಣಕಾಸು ತ:ಖ್ತೆ – ಆನ್‌ಲೈನ್ ಪ್ರಿಂಟ್

ಈ) ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗೆ ನೀಡಲಾದ ಶುಲ್ಕ ವಿನಾಯಿತಿ ತ:ಖ್ತೆ. ಅಂತಹ ಯಾವುದೇ ಬೇಡಿಕೆಗಳು ಇಲ್ಲದಿದ್ದಲ್ಲಿ ಶೂನ್ಯ ವರದಿಯನ್ನು ತಪ್ಪದೆ ಕಳುಹಿಸಿಕೊಡಬೇಕು.

16. ಪರೀಕ್ಷಾ ಪ್ರಶ್ನೆ ಪತ್ರಿಕೆಗಳ ಬೇಡಿಕೆಯ ತ:ಖ್ತೆ. (ದ್ವಿಪ್ರತಿಯಲ್ಲಿ) ಪರೀಕ್ಷೆಗಳಿಗೆ ಹಳೆ ಪಠ್ಯ ಪದ್ಧತಿಯ ಪ್ರಕಾರ ಪುನರಾವರ್ತಿತ ವಿದ್ಯಾರ್ಥಿಗಳು ಹಾಜರಾಗುವುದಿದ್ದಲ್ಲಿ ಪುನರಾವರ್ತಿತ ಪರೀಕ್ಷೆಗಳಿಗೆ ಅಗತ್ಯವಿರುವ ಪ್ರಶ್ನೆ ಪತ್ರಿಕೆ ಬೇಡಿಕೆ ಪಟ್ಟಿಯನ್ನು ಪ್ರತ್ಯೇಕವಾಗಿ ನೀಡುವುದು. ಪ್ರಶ್ನೆ ಪತ್ರಿಕೆ ಬೇಡಿಕೆ ಪಟ್ಟಿಯನ್ನು ದಿನಾಂಕ 27.04.2019ರ ಒಳಗೆ ತಪ್ಪದೆ ಈ ಕಛೇರಿಗೆ ಕಳುಹಿಸಿಕೊಡತಕ್ಕದ್ದು.

17. ಆಂತರಿಕ ಮೌಲ್ಯಮಾಪನದ ಅಂಕಗಳನ್ನು ಆನ್‌ಲೈನ್ ಮುಖಾಂತರ ಸಲ್ಲಿಸಿ, ಅಂತಿಮ ಆನ್‌ಲೈನ್ ಪ್ರಿಂಟಿಂಗ್ ಪ್ರತಿಗಳನ್ನು (ದ್ವಿಪ್ರತಿಗಳಲ್ಲಿ) ಲಿಖಿತ ಪರೀಕ್ಷೆಗಳು ಪ್ರಾರಂಭವಾಗುವ 8 ದಿನಗಳ ಮುಂಚಿತವಾಗಿ ಈ ಕಛೇರಿಗೆ ತಪ್ಪದೆ ಸಲ್ಲಿಸಲು ತಿಳಿಸಲಾಗಿದೆ.

**ಕುಲಸಚಿವರು (ಪರೀಕ್ಷಾಂಗ)**

**ರಿಗೆ:**

ಸಂಬಂಧಪಟ್ಟ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಭಾಗಗಳ ಅಧ್ಯಕ್ಷರು/ಕೋರ್ಸನ್ನು ಹೊಂದಿರುವ ಕಾಲೇಜುಗಳ ಪ್ರಾಂಶುಪಾಲರುಗಳಿಗೆ, ಸೂಚನಾ ಫಲಿಕದಲ್ಲಿ ಪ್ರಕಟಿಸುವಂತೆ ತಿಳಿಸಲಾಗಿದೆ.

**ಪ್ರತಿ:**

1. ಡೀನ್‌ರವರು, ಕಲೆ, ವಾಣಿಜ್ಯ ಮತ್ತು ವಿಜ್ಞಾನ ವಿಷಯಗಳು, ಮಂಗಳೂರು ವಿಶ್ವವಿದ್ಯಾನಿಲಯ.
2. ಕುಲಸಚಿವರು (ಮೌಲ್ಯಮಾಪನ) ಬೆಂಗಳೂರು / ಕರ್ನಾಟಕ / ಮೈಸೂರು / ಗುಲ್ಬರ್ಗಾ / ಕುವೆಂಪು ವಿಶ್ವವಿದ್ಯಾನಿಲಯ.
3. ಕುಲಸಚಿವರು/ಹಣಕಾಸು ಅಧಿಕಾರಿ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
4. ಕುಲಪತಿಯವರ ಆಪ್ತ ಕಾರ್ಯದರ್ಶಿ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
5. ಉಪ ಕುಲಸಚಿವರು (ಪರೀಕ್ಷಾಂಗ), ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
6. ವಿಶೇಷಾಧಿಕಾರಿ, ಪರಿಶಿಷ್ಠ ಜಾತಿ / ಪರಿಶಿಷ್ಠ ಪಂಗಡ ಘಟಕ, ಮಂಗಳೂರು ವಿಶ್ವವಿದ್ಯಾನಿಲಯ
7. ಸಹಾಯಕ ಕುಲಸಚಿವರು (ಪರೀಕ್ಷಾಂಗ) 1 & 2, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
8. ಎಲ್ಲಾ ಅಧೀಕ್ಷಕರು, ಪರೀಕ್ಷಾಂಗ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
9. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ನಿರ್ದೇಶನಾಲಯ, ವಿಶ್ವವಿದ್ಯಾನಿಲಯ, ಕಾಲೇಜು ಆವರಣ, ಮಂಗಳೂರು–1.
10. ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ, ಜಿಲ್ಲಾಧಿಕಾರಿ ಆಫೀಸಿನ ಬಳಿ, ಮಂಗಳೂರು.
11. ಆಪ್ತ ಸಹಾಯಕರು, ಕುಲಸಚಿವರು (ಪರೀಕ್ಷಾಂಗ), ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
12. ಇ.9/ಇ.11 ವಿಷಯ ನಿರ್ವಾಹಕರು/ಕಂಪ್ಯೂಟರ್ ವಿಭಾಗಕ್ಕೆ ಮಾಹಿತಿಗಾಗಿ.